ವಾತನ್ನು ಹೇಳಿದ್ದಾರೆ. ಮೊದಲನೆಯದಾಗಿ, ಇದು ಅತ್ಯಂತ ಪ್ರಾರ್ಥವಾದಂಥ ಎತ್ತರವಾದ ಸ್ಥಳದಲ್ಲಿದೆ. ಈ ವಿಶ್ರಾಂತಿಧಾಮ ನಿರ್ಮಾಣವಾದರೆ ನಾಳೆ ಅಲ್ಲಿಗೆ ಶ್ರೀಮಂತರು ಮಾತ್ರ ಹೋಗುವುದಕ್ಕಾಗುತ್ತದೆ. ನನ್ನಂತೆ ಸೈಕಲ್ ಇರುವಂಥ ಜನಸಾಮಾನ್ಯರು ಅಲ್ಲಿಗೆ ಹೋಗುವುದಕ್ಕೆ ಸಾಧ್ಯವಿಲ್ಲ ಈ ಸ್ಥಳವನ್ನು ಪರಿಶೀಲನೆ ಮಾಡುವುದಕ್ಕೆ ಇಲಾಖೆಯ ಅಧಿಕಾರಿಗಳು ಹೋಗಿದ್ದರೆ ? ಹಿಂದೆ ಮಾನ್ಯ ಬಾಗಲಕೋಟೆಯವರು ಅರಣ್ಯ ಖಾತೆಯ ಮಂತ್ರಿಗಳಾಗಿದ್ದಾಗ ಒಂದು ಸಮಾರಂಭ ಮಾಡಿದರು. ಒಂದು ವರ್ಷದಿಂದ ಆದರ ಕಾರ್ಯ ಸ್ಥಗಿತವಾಗಿದೆ ಇತ್ತೀಚೆಗೆ ಆದರ ಚಟುವಟಿಕೆ ಶುರುವಾಗಿದೆ ಕರ್ನಾಟಕ ಭೂಸೇನಾ ನಿಗಮಕ್ಕೆ ವಿಶ್ರಾಂತಿಧಾಮದ ನಿರ್ಮಾಣದ ಕೆಲಸವನ್ನು ನಿರ್ದಿಷ್ಟವಾದ ಅವಧಿಯಲ್ಲಿ ಮುಗಿಸಲಿಕ್ಕೆ ಕಟ್ಟುನಿಟ್ಟಾದ ಸೂಚನೆಯನ್ನು ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ — ಈಗಾಗಲೇ ೨ ಲಕ್ಷ ಬಿಡುಗಡೆಯಾಗಿದೆ. ಆದಷ್ಟು ಮುಂದಿನ ಏಪ್ರಿಲ್‌ನಲ್ಲಿ ಕೂಡ ಅದಕ್ಕೆ ಬೇಕಾದಂಥ ಹಣವನ್ನು ಬಿಡುಗಡೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಎಷ್ಟು ಬೇಗ ಸಾಧ್ಯವಾಗುತ್ತೋ ಅಷ್ಟು ಬೇಗ ಮುಗಿಸುವುದಕ್ಕೆ ಅವರಿಗೆ ಆದೇಶ ಕೊಡುತ್ತೇನೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.— ಮಾನ್ಯ ಬಾಗಲಕೋಟೆಯವರು ಅರಣ್ಯ ಸಚಿವರಾಗಿದ್ದಾಗ ಅಲ್ಲಿ ಅತ್ಯುತ್ತಮ ಸಸ್ಯ ಕ್ಷೇತ್ರವನ್ನು ಬೆಳೆಸಬೇಕು, ಚಿಗರೆವನ ಮಾಡಬೇಕೆಂದಿದ್ದರು. ಜಮಖಂಡಿಯಲ್ಲಿ ಬೇರೆ ಯಾವುದೇ ಜಾಗವಿಲ್ಲ. ಆದ್ದರಿಂದ ಇಲ್ಲಿ ಹೀಗೆ ಅಭಿವೃದ್ಧಿ ಕೆಲಸವನ್ನು ಮಾಡಲಿಕ್ಕೆ ಹೆಚ್ಚಿನ ಹಣವನ್ನು ಸನ್ಮಾನ್ಯ ಸಚಿವರು ಒದಗಿಸುತ್ತಾರೆಯೇ ?

ಶ್ರೀ ಬಿ. ರಾಚಯ್ಯ.— ಏಪ್ರಿಲ್ ತಿಂಗಳಲ್ಲಿ ಹೊಸದಾಗಿ ಬರತಕ್ಕಂಥ ಹಣ ಏನಿದೆ ಅದರಲ್ಲಿ ಬಿಡುಗಡೆ ಮಾಡುತ್ತೇನೆಂದು ಹೇಳಿದ್ದೇನೆ. ಈ ವರ್ಷ ೨ ಲಕ್ಷ ರೂಪಾಯಿ ಬಿಡುಗಡೆ ಮಾಡಲಾಗಿದೆ. ೪.೮೦ ಲಕ್ಷ ರೂಪಾಯಿಗಳಷ್ಟನ್ನು ಪೂರ್ತಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.— ಆರ್. ಎಂ. ಸಾಟೀಲರ ನಿಮ್ಮ ೪೭೩ನೇ ಪ್ರಶ್ನೆಗೆ ಮಂತ್ರಿಗಳು ವೇಳೆಯನ್ನು ಕೇಳಿದ್ದಾರೆ.

ಶಿಕಾರಿಪುರ ತಾಲ್ಲೂಕಿನ ಉಪಾಧ್ಯಾಯರಿಗೆ ಸಂಬಳ ನೀಡದಿರುವುದು

೪೭೬. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಿರಿ ?

ಅ) ಶಿಕಾರಿಪುರ ತಾಲ್ಲೂಕ್ ಶಿರಾಳಕೊಪ್ಪದಲ್ಲಿನ ಶ್ರೀ ಮಾರುತಿ ಪ್ರೌಢಶಾಲೆ ಉಪಾಧ್ಯಾಯರಿಗೆ ಎಷ್ಟು ತಿಂಗಳುಗಳಿಂದ ಸಂಬಳ ನೀಡಿರುವುದಿಲ್ಲ;

ಆ) ಹಾಗಿದ್ದಲ್ಲಿ ಅವರಿಗೆ ಯಾವಾಗ ಸಂಬಳ ನೀಡಲಾಗುವುದು ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ೧೯೮೮ನೇ ಅಕ್ಟೋಬರ್ ತಿಂಗಳಿಂದ ಈ ಶಾಲೆಯ ಮೂಲ ವೇತನ ಬಿಲ್ಲುಗಳನ್ನು ಮೇಲು ಸಹಿ ಮಾಡಿರುವುದಿಲ್ಲ. ಕಾರಣ ೧೯೮೮ನೇ ಅಕ್ಟೋಬರ್‌ನಿಂದ ವೇತನ ಬಿಲ್ಲುಗಳು ಸದರಿ ಶಾಲೆಯಿಂದ ಈ ಕಛೇರಿಗೆ ಬಂದಿರುವುದಿಲ್ಲ.

ಆ) ಈ ಕೆಳಕಾಣಿಸಿರುವ ವಿಷಯಗಳು ನಿರ್ಮಾನವಾದೊಡನೆ ಸಂಬಳವನ್ನು ಬಿಡುಗಡೆ ಮಾಡಲಾಗುವುದು.

೧) ಪ್ರಭಾರ ಮುಖ್ಯ ಶಿಕ್ಷಕರು ಯಾರು ? ಎಂಬುದು ಅಂತಿಮವಾಗಿ ಇತ್ಯರ್ಥವಾಗಬೇಕು.

೨) ಅನುದಾನ ಸಂಹಿತೆಯ ಸಾಮಾನ್ಯ ನಿಯಮಗಳ ಪಾಲನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೆ, ಈ ಶಾಲೆ ಎಸ್.ಸಿ. ಎಸ್.ಟಿ.ಯವರ ಮ್ಯಾನೇಜಮೆಂಟ್‌ನಲ್ಲಿ ನಡೆಯುತ್ತಿದೆ. ಈ ಶಾಲೆಯಲ್ಲಿ ಕಳೆದ ಅನೇಕ ತಿಂಗಳುಗಳಿಂದ ಮ್ಯಾನೇಜ್‌ಮೆಂಟ್ ಉದ್ದೇಶಪೂರ್ವಕವಾಗಿ ಕಿರುಕುಳ ಕೊಡುತ್ತಾ ಇದೆ, ಉಪಾಧ್ಯಾಯರಿಗೆ ಸಂಬಳ ಕೊಡುತ್ತಾ ಇಲ್ಲ. ಬಿಲ್ಲಿಗೆ ಸಹಿ ಕೊಡದೇ ಇದ್ದುದರಿಂದ ಬೇಗ ಹಾಕಿದ್ದರು. ನಂತರ ಶಾಲಾ ಉಪಾಧ್ಯಾಯರೇ ಬಾಡಿಗೆ ಕಟ್ಟಿ ಶಾಲೆಯ ಬೀಗ ತೆಗೆಸಿದ್ದಾರೆ. ಪ್ರಭಾರ ಮುಖ್ಯ ಶಿಕ್ಷಕರು ಯಾರು

ಹಾಂದು ತೀರ್ಮಾನ ತೆಗೆದುಕೊಳ್ಳುವುದಕ್ಕೆ ನಿಮ್ಮ ಇಲಾಖೆ ನಿಧಾನ ಮಾಡುತ್ತಿದೆ. ಸಂಬಳ ಕೊಡದೇ ಇದ್ದರೆ ಶಿಕ್ಷಕರ ಗತಿ ಏನು? ಆದ್ದರಿಂದ ಇದರ ಬಗ್ಗೆ ಸ್ಪಷ್ಟವಾದಂಥ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕು.

ಶ್ರೀ ಎಂ. ಚಂದ್ರಶೇಖರ್.— ಆಡಳಿತ ಮಂಡಲಿಯವರ ಮತ್ತು ಶಿಕ್ಷಕರ ಮಧ್ಯೆ ಜಗಳ ಉಂಟಾಗಿದ್ದ ಆಡಳಿತ ಮಂಡಲಿಯವರು ಒಬ್ಬರನ್ನು ಆರಿಸಿ ಇವರು ಮುಖ್ಯೋಪಾಧ್ಯಾಯರು ಎಂದು ಹೇಳಿದಾಗ ಅವರನ್ನು ಬೇರೆ ಶಿಕ್ಷಕರು ಒಪ್ಪಿಕೊಳ್ಳದೆ. ಶಿಕ್ಷಕರು ಮತ್ತು ಪೋಷಕರು ಸೇರಿ ಕೊಂಡು ಬೇರೆ ಒಬ್ಬರ ಹೆಸರನ್ನು ಸೂಚಿಸಿ ಅವರು ಮುಖ್ಯೋಪಾಧ್ಯಾಯರಾಗಬೇಕು ಎಂದು ಹೇಳಿದರು. ಈ ರೀತಿಯ ಒಳ ಜಗಳದಿಂದಾಗಿ ಇದು ಇನ್ನೂ ತೀರ್ಮಾನಕ್ಕೆ ಬಂದಿಲ್ಲ. ಅದೂ ಅಲ್ಲದೆ. ೧೯೮೫-೮೬ರಿಂದ ಆ ಶಾಲೆಯ ಮಾನ್ಯತೆಯನ್ನು ನವೀಕೃತ ಮಾಡಿಕೊಂಡಿರುವುದಿಲ್ಲ ಮತ್ತು ಸ್ಥಿರ ಆಸ್ತಿಯ ಬಗ್ಗೆ ಬಾಕಿಯೊತ್ತ ೨ ಸಾವಿರ ರೂಪಾಯಿಗಳನ್ನು ಕೊಟ್ಟಿರುವುದಿಲ್ಲ. ಅನುದಾನದ ಪ್ರಸ್ತಾವನೆಯನ್ನು ಈವರೆಗೂ ಸಲ್ಲಿಸಿಲ್ಲ. ಮತ್ತು ಶಾಲೆಯನ್ನು ಅನುದಾನಕ್ಕೆ ಒಳಪಡಿಸುವ ಸಮಯದಲ್ಲಿ ತೋರಿಸಲಾದ ಪೀಠೋಪಕರಣಗಳು ಮತ್ತು ಪಾಠೋಪಕರಣಗಳು ಈಗ ಶಾಲೆಯಲ್ಲಿ ಇರುವುದಿಲ್ಲ. ಇದು ತನಿಖೆಯಿಂದ ವ್ಯಕ್ತವಾಗಿದೆ. ಈಗ ಪೋಷಕರು. ಶಿಕ್ಷಕರು ಮತ್ತು ಆಡಳಿತ ಮಂಡಲಿಯವರೂ ಬೇರೆ ಬೇರೆ ಗುಂಪುಗಳಾಗಿರುವುದರಿಂದ ಅದರ ಬಗ್ಗೆ ಇತ್ಯರ್ಥ ಮಾಡಿ ಅನಂತರ ಕ್ರಮ ತೆಗೆದು ಕೊಳ್ಳುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ — ಮ್ಯಾನೇಜ್‌ಮೆಂಟ್‌ನವರು ನನ್ನ ಕ್ಷೇತ್ರವಾದ ಶಿರಾಳ ಕೊಪ್ಪದಲ್ಲಿ ಉದ್ದೇಶಪೂರ್ವಕವಾಗಿ ಮಾಡಿದ್ದಾರೆ. ಈಗ ತಾವು ಬಿಲ್ ಕಳುಹಿಸಿಲ್ಲ, ಅಲ್ಲಿ ಸಾಕಷ್ಟು ಗೊಂದಲ ಇದೆ ಎಂದು ತಾವು ಏನು ಹೇಳುತ್ತಿದ್ದೀರಿ ಅದು ಸತ್ಯ ಇದೆ. ಈಗ ಅವರು ಬಹಳ ಕಿರುಕುಳ ಅನುಭವಿಸುತ್ತಿರುವುದರಿಂದ ಕಾನೂನು ಪ್ರಕಾರ ತಕ್ಷಣ ಕ್ರಮ ತೆಗೆದುಕೊಂಡು ಶಿಕ್ಷಕರಿಗೆ ಸಂಬಳ ಕೊಡ ತಕ್ಕ ವ್ಯವಸ್ಥೆ ಮಾಡಬೇಕು. ಮಕ್ಕಳ ಪೋಷಕರೂ ಮತ್ತು ಟೀಚರ್ಸ್ ಕಾನೂನು ಬದ್ಧವಾಗಿ ಕೇಳುತ್ತಿದ್ದಾರೆ. ಮೊದಲು ಶಿಕ್ಷಕರಿಗೆ ಸಂಬಳ ಸಿಕ್ಕತಕ್ಕ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆಯೇ?

ಶ್ರೀ ಎಂ. ಚಂದ್ರಶೇಖರ್.— ಆಯುಕ್ತರು ತೀರ್ಮಾನ ತೆಗೆದುಕೊಳ್ಳಬೇಕಾದರೆ ಆಡಳಿತ ಮಂಡಲಿ ಮತ್ತು ಇವರನ್ನು ಕರೆಸಿ ತೀರ್ಮಾನ ಕೊಡಬೇಕಾಗುತ್ತದೆ. ಅವರೇ ಒಂದು ಸಮಿತಿ ಮಾಡಿ ಕೊಳ್ಳಬೇಕಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಅವರು ಮಾಡಿ ಕಳುಹಿಸಿದ್ದಾರೆ.

ಶ್ರೀ ಎಂ. ಚಂದ್ರಶೇಖರ್.— ಆಡಳಿತ ಮಂಡಲಿಯವರಿಗೆ ನಾವು ಕೇಳಬೇಕಾಗುತ್ತದೆ. ಇದರ ಬಗ್ಗೆ ನಾನು ಆಯುಕ್ತರಿಗೆ ಹೇಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮ್ಯಾನೇಜ್‌ಮೆಂಟ್ ವಿಷಯದಲ್ಲಿ ಪ್ರಭಾರ ಮುಖ್ಯ ಶಿಕ್ಷಕರು ಯಾರು ಆಗಬೇಕೆಂಬುದರ ಬಗ್ಗೆ ಸಮಯ ತೆಗೆದುಕೊಳ್ಳಿ. ಸುಮಾರು ೮-೯ ತಿಂಗಳಿಂದ ಶಿಕ್ಷಕರುಗಳಿಗೆ ಸಂಬಳ ಇಲ್ಲದೆ ತೊಂದರೆಯಾಗಿದೆ. ಆದ್ದರಿಂದ. ಇವರುಗಳಿಗೆ ಸಂಬಳ ಕೊಡಿಸತಕ್ಕ ವ್ಯವಸ್ಥೆ ಮಾಡಬೇಕು.

ಶ್ರೀ ಎಂ. ಚಂದ್ರಶೇಖರ್.— ಈಗ ಕೆಲವು ಆಡಳಿತ ಮಂಡಲಿ ವಶದಲ್ಲಿರುವುದರಿಂದ ಕೆಲವು ನಿಯಮಗಳು ಪಾಲನೆ ಆಗಲಿಲ್ಲ. ಆದ್ದರಿಂದ, ವೇತನ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಈ ಬಗ್ಗೆ ಇತ್ಯರ್ಥ ಮಾಡಿ ಕ್ರಮ ತೆಗೆದುಕೊಳ್ಳಲಿಕ್ಕೆ ಆಯುಕ್ತರಿಗೆ ತಿಳಿಸುತ್ತೇನೆ.

ಉಡುಪಿ ತಾಲ್ಲೂಕಿನ ಪೊಲಿಪುನಲ್ಲಿರುವ ಸರಕಾರಿ ಜ್ಯೂನಿಯರ್ ಕಾಲೇಜು

ಶ್ರೀ. ಶ್ರೀ ವಸಂತ ವಿ. ಸಾಲಿಯಾನ್ (ಕಾಪು).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೯-೯೦ರಲ್ಲಿ ಕಾಪು ಕ್ಷೇತ್ರದ ಪೊಲಿಪು ಸರ್ಕಾರಿ ಜ್ಯೂನಿಯರ್ ಕಾಲೇಜನ್ನು ಪೂರ್ಣ ಪ್ರಮಾಣದ ಕಾಲೇಜನ್ನಾಗಿ ಮಾಡುವ ಯೋಜನೆ ಏನಾದರೂ ಇದೆಯೆ?

ಆ) ಹಾಗಿದ್ದಲ್ಲಿ. ಈ ಯೋಜನೆ ಯಾವ ಹಂತದಲ್ಲಿದೆ ಹಾಗೂ ಯಾವಾಗ ಮಂಜೂರಾತಿ ನೀಡಲಾಗುವುದು?